176

ನಂ: ಎಲ್ಇಎನ್-318:88-89

ಜಿಲ್ಲಾಧಿಕಾರಿಯವರ ಕಾರ್ಯಾಲಯ
ಹಾಸನ ಜಿಲ್ಲೆ – ಹಾಸನ.
ದಿನಾಂಕ: 26-10-1988.

ವಿಷಯ:- ಅನ್ಯಸಂಕ್ರಮಣ ಆದೇಶದಿಂದ ನಂತರ ಸದರಿ ಪ್ರದೇಶವನ್ನು ಹಾಸನ ನಗರ ಯೋಜನಾ ಅಭಿವೃದ್ಧಿ ಪ್ರಾಧಿಕಾರ : ಹಾಸನ ನಗರ ಯೋಜನೆ ಅವರಿಂದ ಲೇ ಔಟ್ ಪ್ಲಾನ್ ಅನುಮತಿ ಪಡೆಯದೆ ನೋಂದಣಿ ಮಾಡುವ ವಿಚಾರ ಕುರಿತು.

## ಸುತ್ತೋಲೆ

ಹಾಸನ ನಗರ ಪ್ರದೇಶ ಮತ್ತು ಇತರೆ ತಾಲ್ಲೂಕುಗಳ ಪಟ್ಟಣ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸುವಾಗ ಹಾಸನ ನಗರ ಯೋಜನಾ ಅಭಿವೃದ್ಧಿ ಪ್ರಾಧಿಕಾರ : ಹಾಸನ ನಗರ ಯೋಜನೆ ಹಾಸನ ಅವರಿಂದ ಲೇ ಔಟ್ ಪ್ಲಾನ್‌ಗೆ ಮಂಜೂರಾತಿ ಪಡೆಯದೆ ಮಾರಾಟ ಮಾಡುತ್ತಿರುವುದು ಕಂಡುಬರುತ್ತಿದ್ದು, ಈ ರೀತಿ ಅನ್ಯಸಂಕ್ರಮಣ ಆದ ಪ್ರದೇಶವನ್ನು ಮಾರಾಟ ಮಾಡಿದ ನಂತರ ಲೇಔಟ್ ಪ್ಲಾನ್ ಮಾಡಲು ಕಷ್ಟಕರವಾಗಿರುವುದು ಕಂಡು ಬಂದಿದೆ.

ಆದುದರಿಂದ ಅನ್ಯಸಂಕ್ರಮಣ ಆದ ಪ್ರದೇಶವನ್ನು ಮಂಜೂರಿದಾರರು ಬೇರೆಯವರಿಗೆ ಮಾರಾಟ ಮಾಡುವ ಮೊದಲು ಹಾಸನ ನಗರ ಯೋಜನಾ ಅಭಿವೃದ್ಧಿ ಪ್ರಾಧಿಕಾರ : ನಗರ ಯೋಜನೆ, ಹಾಸನ ರವರಿಂದ ಅನುಮತಿ ಪಡೆದು ಲೇಔಟ್ ಪ್ಲಾನ್ ಹಾಜರು ಪಡಿಸಿದ ನಂತರವೇ ನೋಂದಣಿ ಅಧಿಕಾರಿಗಳು ಸದರಿ ಪ್ರದೇಶವನ್ನು ನೋಂದಣಿ ಮಾಡುವುದು.

ಒಂದು ಪಕ್ಷ ಮಂಜೂರಿದಾರರು ಅನ್ಯಸಂಕ್ರಮಣ ಆದ ಪ್ರದೇಶಕ್ಕೆ ಅನುಮತಿ ಪಡೆದ ಲೇ ಔಟ್ ಪ್ಲಾನ್ ಹಾಜರು ಪಡಿಸದಿದ್ದರೆ ಸದರಿ ಪ್ರದೇಶವನ್ನು ಯಾವ ಕಾರಣದಿಂದಲೂ ನೋಂದಣಿ ಅಧಿಕಾರಿಗಳು ನೋಂದಣಿ ಮಾಡಬಾರದು. ಇದು ನೋಂದಣಿ ಅಧಿಕಾರಿಗಳ ಸ್ವಂತ ಜವಾಬ್ದಾರಿಯಾಗಿರುತ್ತದೆ.

ತಾಲ್ಲೂಕು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಉಪ ವಿಭಾಗಾಧಿಕಾರಿಗಳು : ತಹಶೀಲ್ದಾರರು ವ್ಯವಸಾಯ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತನೆಗೆ ಆದೇಶ ನೀಡಿದ ನಂತರ ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆದೇಶದಲ್ಲಿ ಮೇಲ್ಕಂಡ ಷರತ್ತನ್ನು ನಮೂದಿಸುವುದು. ಹಾಗೂ ಆದೇಶದ ಪ್ರತಿಗಳನ್ನು ನಗರ ಯೋಜನಾ ಅಭಿವೃದ್ಧಿ ಪ್ರಾಧಿಕಾರ, ಹಾಸನ : ನಗರ ಯೋಜನೆ, ಹಾಸನ : ಮತ್ತು ಸಂಬಂಧಪಟ್ಟ ಉಪ ನೋಂದಣಿ ಅಧಿಕಾರಿಗಳು ಅವರಿಗೆ ಕಳುಹಿಸಬೇಕು. ತಪ್ಪಿದಲ್ಲಿ ಉಪ ವಿಭಾಗಾಧಿಕಾರಿಗಳ : ತಹಶೀಲ್ದಾರರ ಸ್ವಂತ ಜವಾಬ್ದಾರಿಯಾಗಿರುತ್ತದೆ.

ಅನ್ಯಸಂಕ್ರಮಣ ಆದೇಶ ಪಡೆದ ಮಂಜೂರಿದಾರರು ಸದರಿ ಪ್ರದೇಶವನ್ನು ಬೇರೆಯವರಿಗೆ ಮಾರಾಟ ಮಾಡುವ ಮೊದಲು ಹಾಸನ ನಗರ ಯೋಜನಾ ಅಭಿವೃದ್ಧಿ ಪ್ರಾಧಿಕಾರ : ನಗರ ಯೋಜನೆ ಅವರಿಂದ ಅನುಮತಿ ಪಡೆದ ಲೇ ಔಟ್ ಪ್ಲಾನ್ ಹಾಜರು ಪಡಿಸಿದ ನಂತರ ಮಾತ್ರ ಸದರಿ ಪ್ರದೇಶವನ್ನು ನೋಂದಣಿ ಮಾಡುವುದು. ಇದು ಉಪನೋಂದಣಿ ಅಧಿಕಾರಿಗಳ ಸ್ವಂತ ಜವಾಬ್ದಾರಿಯಾಗಿರುತ್ತದೆ.

ಸುತ್ತೋಲೆ ತಲುಪಿದ್ದಕ್ಕೆ ಸ್ವೀಕೃತಿ ಕಳುಹಿಸಬೇಕು.

ಸಹಿ: (ಉಪೇಂದ್ರ ತ್ರಿಪಾಠಿ)
ಜಿಲ್ಲಾಧಿಕಾರಿಗಳು
ಹಾಸನ ಜಿಲ್ಲೆ ಹಾಸನ.

28 X 88

6791
29.10.88

—2